# ಫ್ಯೂಷನ್- ಫ್ಯಾಷನ್!

ಫ್ಯೂಷನ್ ಸಂಗೀತ ಗೊತ್ತು. ಇದೇನು ಫ್ಯೂಷನ್ ಉಡುಗೆ? ಫ್ಯಾಷನ್‌ಪ್ರಿಯರ ಅಚ್ಚುಮೆಚ್ಚಿನ ಉಡುಪಿನ ಸಂಗ್ರಹದಲ್ಲಿ ಇದೀಗ ಫ್ಯೂಷನ್ ಉಡುಗೆಗಳೂ ಸ್ಥಾನ ಪಡೆದುಕೊಂಡಿವೆ.

ಫ್ಯೂಷನ್ ಉಡುಗೆ ಎಂದರೆ ಸಾಂಪ್ರದಾಯಿಕ–ಆಧುನಿಕ ಎರಡೂ ಲುಕ್ ಕೊಡುವ ಟು ಇನ್ ವನ್ ಉಡುಪುಗಳು. ಇದು ಹಬ್ಬದ ಸಂಭ್ರಮಕ್ಕೂ ಸೈ, ಸಂಜೆಯ ತಳುಕಿನ ಪಾರ್ಟಿಗೂ ಸೈ ಎನಿಸುವ ಉಡುಗೆಗಳು. ಇದೀಗ 'ಟ್ರೆಡಿಷನಲ್– ಟ್ರೆಂಡಿ' ಹೆಸರಿನಲ್ಲಿ ಬಂದಿರುವ ಫ್ಯಾಷನಬಲ್ ಸಲ್ವಾರ್, ಕುರ್ತಿಗಳು 'ಫ್ಯೂಷನ್' ಉಡುಗೆ ಎನಿಸಿವೆ.

ಶ್ರಾವಣ ಮಾಸದಲ್ಲಿ ಎರಡು ಹಬ್ಬಗಳು ಕಳೆದಿವೆ. ಇನ್ನು ಮುಂದೆ ಬರಲಿದೆ ಗೌರಿ, ಗಣೇಶ, ನವರಾತ್ರಿ, ದೀಪಾವಳಿ.. ಮುಂತಾದ ಸಡಗರ ಸಂಭ್ರಮಗಳು. ಈ ಹಬ್ಬಗಳಿಗೆಲ್ಲ ಫ್ಯೂಷನ್ ಉಡುಗೆಗಳೇ ಸದ್ದು ಮಾಡಲಿವೆ. ಆಧುನಿಕ ಲುಕ್ ನೀಡುವ ಸಾಂಪ್ರದಾಯಿಕ ಉಡುಗೆಗಳಿಗೇ ಪ್ರಾಶಸ್ತ್ಯ ನೀಡಿ, ಇಂದಿನ ಫ್ಯಾಷನ್ ಟ್ರೆಂಡ್‌ಗೆ ತಕ್ಕ ಹಾಗೆ ಉಡುಪುಗಳೂ ವೈವಿಧ್ಯಮಯ ವಿನ್ಯಾಸಗಳಲ್ಲಿ ಸಿಗುತ್ತವೆ. ಅದು ಅನಾದಿ ಕಾಲದಿಂದಲೂ ಫ್ಯಾಷನ್ ಟ್ರೆಂಡ್ ಆಗಿಯೇ ಉಳಿಯುತ್ತಾ ಬಂದ ಸಾಂಪ್ರದಾಯಿಕ ಸೀರೆಯೇ ಆಗಿರಲಿ, ರೇಷ್ಮೆಯ ಜರಿ ಲಂಗ, ಗಾಗ್ರಾ ಚೋಲಿಯೇ ಆಗಿರಲಿ.. ಇವೇ ಉಡುಪುಗಳಿಗೆ ಒಂದಿಷ್ಟು ಫ್ಯಾಷನ್ ಟಚ್ ಕೊಟ್ಟು ಉಡುಪು ವಿನ್ಯಾಸಗಾರರು ಮತ್ತಷ್ಟು ಫ್ಯಾಷನಬಲ್ ಆಗಿ ಕಾಣುವಂತೆ ಮಾಡುತ್ತಾರೆ. ಇವೆಲ್ಲ ಉಡುಪುಗಳು ಹಬ್ಬದ ಸಂದರ್ಭಕ್ಕೆ ಫ್ಯೂಷನ್–ಫ್ಯಾಷನ್ ಆಗಿ ಮಿಂಚುತ್ತವೆ.

'ಫ್ಯೂಷನ್ ಡ್ರೆಸ್‌ನಲ್ಲೂ ಗೋಲ್ಡರ್ ಪ್ರಿಂಟ್ ಮೇಲೆ ಬ್ರೈಟ್ ಕಲರ್ ಉಡುಪು ಟ್ರೆಡಿಷನ್ ಅನ್ನು ಇಂದಿನ ಟ್ರೆಂಡ್ ಜತೆಗೆ ಬ್ಲೆಂಡ್ ಮಾಡಿ ಹೊಸ ವಿನ್ಯಾಸದಂತೆಯೇ ಕಂಗೊಳಿಸುತ್ತದೆ. ಮೊದಲೆಲ್ಲಾ ಸಲ್ವಾರ್‌ನಲ್ಲೇ ಹಲವು ಬಣ್ಣ, ವಿನ್ಯಾಸ, ಆಕಾರದ ಸೀಮಿತ ವೈವಿಧ್ಯಗಳ ಉಡುಪುಗಳಿದ್ದವು. ಆದರೆ ಈಗ ಫ್ಯಾಷನ್ ಜಗತ್ತು ಸಾಕಷ್ಟು ವಿಸ್ತಾರವಾಗಿದೆ. ಹೊಸ ಹೊಳಹುಗಳನ್ನು ಒಡಲಲ್ಲಿ ತುಂಬಿಕೊಂಡು ಕಣ್ಣಿಗೊಪ್ಪುವ, ಮನಸ್ಸಿಗೊಪ್ಪುವ ವಿನ್ಯಾಸಗಳ ಉಡುಗೆಗಳ ಮಹಾಪೂರವೇ ಮಾರುಕಟ್ಟೆಗೆ ಹರಿದುಬರುತ್ತಿದೆ. ಸಲ್ವಾರ್, ಕುರ್ತಾ, ಪಲಾಜೊ, ಧೋತಿ.. ಮುಂತಾದವು ತಮ್ಮ ದೇಹದ ಆಕಾರಕ್ಕೆ, ಗಾತ್ರಕ್ಕೆ ಬೇಕಾದ ಹಾಗೆ ಸೆಟ್ ಮಾಡಿಕೊಂಡು ತೊಟ್ಟು ಸಂಭ್ರಮಿಸಬಹುದು. ಇವೆಲ್ಲಕ್ಕೂ ಮಿಕ್ಸ್ ಅಂಡ್ ಮ್ಯಾಚ್ ಮಾಡಿ ತೊಡುವ ಅವಕಾಶವೂ ಇದೆ' ಎನ್ನುತ್ತಾರೆ ಕೊಡಗು ಮೂಲದ ವಸ್ತ್ರವಿನ್ಯಾಸಕಿ ಶ್ವೇತಾ ಪೂವಪ್ಪ.



### ಆಯ್ಕೆ ಹೀಗಿರಲಿ...

- ಬಣ್ಣಗಳ ಕಾಂಬಿನೇಷನ್ ಬಗ್ಗೆ ಗಮನವಿರಲಿ. ಡಾರ್ಕ್ ಶೇಡ್ ಉಡುಗೆ ಶ್ವೇತ ವರ್ಣದವರಿಗೆ ಒಪ್ಪುತ್ತದೆ. ತಿಳಿಯಾದ ಬಣ್ಣ ಸ್ವಲ್ಪ ಕಪ್ಪಿರುವವರಿಗೆ ಸೂಕ್ತ.
- ಧರಿಸಲು ಆರಾಮವೆನಿಸುವ ಉಡುಗೆ ಖರೀದಿಸಿ.
- ದೇಹದ ಆಕಾರದ ಬಗ್ಗೆ ಕಾಳಜಿ ವಹಿಸಿ ಫಿಟ್‌ನೆಸ್ ಕಡೆಗೂ ಗಮನವಿದ್ದರೆ ಯಾವ ಫ್ಯಾಷನ್ ಉಡುಪುಗಳೂ ಚೆನ್ನಾಗಿ ಕಾಣಿಸುತ್ತವೆ.

■ ಯು.ಎ.



ತಯಾರಾದ ಲೇಯರ್ ಕುರ್ತಿಗಳಿಗೆ ಎಲ್ಲಿಲ್ಲದ ಬೇಡಿಕೆ. ಇವು ಬೇಸಿಗೆಯಲ್ಲಿ ದೇಹವನ್ನು ತಂಪಾಗಿ, ಚಳಿಗಾಲದಲ್ಲಿ ದೇಹವನ್ನು ಬೆಚ್ಚಗೆ ಇರಿಸುತ್ತವೆ.

ಇನ್ನು ಈ ಲೇಯರ್ ಕುರ್ತಿಗಳಲ್ಲಿ ಹ್ಯಾಂಡ್‌ವರ್ಕ್, ಎಂಬ್ರಾಯಡರಿ, ಮಿರರ್ ವರ್ಕ್, ಲೇಸ್ ವರ್ಕ್ ಹೀಗೆ ಸಾಕಷ್ಟು ಅವಕಾಶಗಳಿವೆ. ಇಂಥವುಗಳನ್ನು ನೀವು ಯಾವುದೇ ಸಭೆ, ಸಮಾರಂಭ, ಮದುವೆ ಕಾರ್ಯಕ್ರಮಗಳಲ್ಲಿ ತೊಡಬಹುದಾಗಿದೆ. ಇವುಗಳಲ್ಲಿಯೇ ಇಂಡೋವೆಸ್ಟರ್ನ್ ಲೇಯರ್ ಕುರ್ತಿಗಳನ್ನು ಪಾರ್ಟಿಗಳಲ್ಲಿ ತೊಡಬಹುದಾಗಿದೆ. ಎಲ್ಲ ಕಾಲಕ್ಕೂ ಸೂಕ್ತವಾಗುವಂತೆ ತಯಾರಿಸಲಾದ ಈ ಕುರ್ತಿಗಳಿಗೆ ಅಳವಡಿಸಿರುವ ಸ್ಲೀವ್ಸ್‌ಗಳಲ್ಲಿಯೂ ಕೂಡ ಸಾಕಷ್ಟು ವರ್ರೈಟಿಗಳಿವೆ. ಈ ಕುರ್ತಿಗಳನ್ನು ಬೇಸಿಗೆಯಲ್ಲಿ ಸಿವ್‌ಲೆಸ್ ಧರಿಸಬಹುದು, ಬೇಕಾದಲ್ಲಿ ಉದ್ದ ತೋಳು, ಬೆಲ್ ಬಾಟಮ್ ತೋಳು, ಮುಕ್ಕಾಲು ತೋಳು, ಪುಗ್ಗೆ ತೋಳು, ಇಡೀ ತೋಳುಗಳಿಗೆ ಬಟನ್‌ಗಳನ್ನು ಕೂಡ ಅಳವಡಿಸಿ ಧರಿಸಬಹುದಾಗಿದೆ. ಇನ್ನು ಈ ಲೇಯರ್ ಕುರ್ತಿಗಳ ಇನ್ನೊಂದು ವಿಶೇಷತೆಯೆಂದರೆ ಇವುಗಳಿಗೆ ಕಾಲರ್ ಕೂಡ ಅಳವಡಿಸಬಹುದು. ಇವುಗಳನ್ನು ಸಾಮಾನ್ಯ ಕುರ್ತಿಗಳ ಮೇಲೆ ಜಾಕೇಟ್ ತರಹ ಕೂಡ ತೊಡಬಹುದಾಗಿದೆ.

ಮೊದಲ ಬಾರಿಗೆ ಲೇಯರ್ ಕುರ್ತಿ ಧರಿಸುವವರಿಗೆ ಕೆಲವೊಂದು ಟಿಪ್ಸ್:

ಲೇಯರ್ ಕುರ್ತಿಗಳು ಪ್ರಿಂಟೆಂಡ್ ಮೆಟೀರಿಯಲ್‌ನಲ್ಲಿಯೂ ಕೂಡ ದೊರೆಯುತ್ತವೆ. ಆದ್ದರಿಂದ ನಿಮ್ಮ ವಯೋಮಿತಿಗೆ ಅನುಗುಣವಾಗಿ ಮೊದಲು ಯಾವ ಬಣ್ಣ ನಿಮಗೆ ಹೊಂದಿಕೆಯಾಗುತ್ತದೆ ಎಂದು ತಿಳಿದು ಅನಂತರ ಆಯ್ದುಕೊಳ್ಳಬೇಕು. ಕೆಲವರಿಗೆ ತಿಳಿ ಬಣ್ಣದ ಬಟ್ಟೆಗಳು ಸೂಕ್ತವಾದರೆ, ಇನ್ನು ಕೆಲವರಿಗೆ ಗಾಢ ಬಣ್ಣ ಹೊಂದಿಕೆಯಾಗುತ್ತದೆ. ಆದ್ದರಿಂದ ಬಣ್ಣಗಳನ್ನು ಆಯ್ದುಕೊಳ್ಳುವಾಗ ಸ್ವಲ್ಪ ಗಮನವಿರಲಿ.

ಹಾಗೇ ಕಡಿಮೆ ದರದಲ್ಲಿ ಸಿಗುವ ಲೇಯರ್ ಕುರ್ತಿಗಳು ಕಲರ್ ಹೋಗುವ ಸಂಭವವಿರುತ್ತದೆ, ಆದ್ದರಿಂದ ಬಟ್ಟೆಯನ್ನು ಆಯ್ದುಕೊಳ್ಳುವಾಗ ಬಟ್ಟೆಯ ಕ್ವಾಲಿಟಿ ನೋಡಿ ಚೆನ್ನಾಗಿದೆಯೋ ಇಲ್ಲವೋ ಎಂಬುದನ್ನು ನೋಡಿ ಖರೀದಿಸಿ.

ಈ ಲೇಯರ್ ಕುರ್ತಿಗಳು ತುಂಬಾನೇ ಗ್ರ್ಯಾಂಡಾಗಿರುವುದರಿಂದ ಇದನ್ನು ಧರಿಸಿದಾಗ ಆಕ್ಸೆಸರಿಸ್‌ಗಳ ಅವಶ್ಯಕತೆ ಇಲ್ಲ. ಆದರೂ ಬೇಕೆನಿಸಿದರೆ ಸಿಂಪಲ್ಲಾಗಿರುವ ಕಿವಿಯೋಲೆ ಧರಿಸಬಹುದು.

ಈ ಲೇಯರ್ ಕುರ್ತಿ ಧರಿಸಿದಾಗ ಹೈಹೀಲ್ಸ್ ಚಪ್ಪಲಿ ತೊಟ್ಟರೆ ಚೆನ್ನ. ಇಲ್ಲವೇ ನಿಮ್ಮ ಲೇಯರ್ ಕುರ್ತಿಗೆ ಮ್ಯಾಚ್ ಆಗುವ ಮೋಜರಿ ಪಾದರಕ್ಷೆಯನ್ನು ಧರಿಸಿದರೆ ಇನ್ನೂ ಚೆನ್ನಾಗಿರುತ್ತವೆ.

■